ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 08-08-2023.

**ಪಾಟೀಸವಾಲು 2 ರಿಂದ 4ನೇ ಪ್ರತಿವಾದಿ ಪರ ಶ್ರೀ ಇ.ಓಂಕಾರೇಶ್ವರ ವಕೀಲರಿಂದಃ**

ನಮ್ಮ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲ ಹೆಂಡತಿ ತೀರಿಕೊಂಡ ನಂತರ ನಮ್ಮ ತಂದೆ 2ನೇ ಮದುವೆ ಮಾಡಿಕೊಂಡಿದ್ದರು. ನಮ್ಮ ತಾಯಿ ಚಳ್ಳವ್ವ ಮೊದಲ ಹೆಂಡತಿ ಇದ್ದಳು. ನನ್ನ ಜನನ ಆದ ಕೂಡಲೇ ನಮ್ಮ ತಾಯಿ ತೀರಿಕೊಂಡಿರುತ್ತಾರೆ. ನಮ್ಮ ತಾಯಿ 60 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಈ ದಾವೆ ಹಾಕಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಪತ್ರ ತಯಾರಿಸುವಾಗ ನನ್ನ ಜನ್ಮದ ನಂತರ ನನ್ನ ತಾಯಿ ತೀರಿಕೊಂಡಿರುವುದಾಗಿ ವಕೀಲರಿಗೆ ತಿಳಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ಭಾಗ ಕೇಳಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಮ್ಮ ತಂದೆ ಭರಮಪ್ಪ ಇವರು ತುಗ್ಗಲದೋಣಿ ಗ್ರಾಮದ ಸ.ನಂ.16/4 ವಿಸ್ತೀರ್ಣ 7 ಎಕರೆ 34 ಗುಂಟೆ ಜಮೀನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಾಯಿಯ ತಂದೆಯ ಹೆಸರು ಕಲ್ಲಪ್ಪ ಭರಮಪ್ಪ ವತ್ತಿ. ನಮ್ಮ ತಾಯಿಯ ತಂದೆಯ ಹೆಸರು ಕಲ್ಲಪ್ಪ ರಾಮಪ್ಪ ವತ್ತಿ ಎಂದರೆ ಸರಿಯಲ್ಲ. ಸ.ನಂ.16/4 ನ್ನು ನಮ್ಮ ಅಜ್ಜ ನಮ್ಮ ತಾಯಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಚಳ್ಳವ್ವ ಭರಮಪ್ಪ ಮಂತ್ರಿ ಎಂದರೆ ನಮ್ಮ ತಾಯಿಯವರು. ಸ.ನಂ.16/4 ನಮ್ಮ ತಾಯಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಂತರ ಆ ಜಮೀನು ನಮ್ಮ ತಂದೆ ಭರಮಪ್ಪನ ಹೆಸರಿನಲ್ಲಿ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಅಜ್ಜ ನಮ್ಮ ತಾಯಿಗೆ ಸ.ನಂ.16/4 ನ್ನು ಕೊಟ್ಟಿದ್ದರು ನಂತರ ಆ ಜಮೀನನ್ನು ನಮ್ಮ ತಂದೆ ತನ್ನ

ಹೆಸರಿಗೆ ಮಾಡಿಸಿಕೊಂಡಿದ್ದು ಸಿದ್ದಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈ ದಾವೆ ಹಾಕಿದ ಸಮಯಕ್ಕೆ ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ನ್ಯಾಯಾಲಯಕ್ಕೆ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**5 ನೇ ಪ್ರತಿವಾದಿ ಪರ ಶ್ರೀ ವಿ.ಎಸ್.ಪಂಪಾಪತಿ ವಕೀಲರನ್ನು ಕರೆಸಿದಾಗ ಹಾಜರಿಲ್ಲ ಆದುದರಿಂದ ಅವರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**6 ನೇ ಪ್ರತಿವಾದಿ ಪರ ಶ್ರೀ ಎಸ್.ಕೆ.ಪಿ. ವಕೀಲರನ್ನು ಕರೆಸಿದಾಗ ಹಾಜರಿಲ್ಲ ಆದುದರಿಂದ ಅವರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ